


International Journal of Kannada Research
www.kannadajournal.com

ISSN: 2454–5813
IJKR 2018; 4(2): 55-56
© 2018 IJKR
www.kannadajournal.com
Received: 11-02-2018
Accepted: 12-03-2018

**ಡಾ.ಹಣಮಂತ ಬಿ. ಮೇಲಕೇರಿ**
ಉನ್ನತ ಸಂಶೋಧಕರು,
ಕನ್ನಡ ವಿಭಾಗ ಗುಲಬರ್ಗಾ
ವಿಶ್ವವಿದ್ಯಾಲಯ ಕಲಬುರಗಿ

**Correspondence**
**ಡಾ.ಹಣಮಂತ ಬಿ. ಮೇಲಕೇರಿ**
ಉನ್ನತ ಸಂಶೋಧಕರು,
ಕನ್ನಡ ವಿಭಾಗ ಗುಲಬರ್ಗಾ
ವಿಶ್ವವಿದ್ಯಾಲಯ ಕಲಬುರಗಿ

# ಕನ್ನಡ ಕಾವ್ಯ ಮತ್ತು ಸ್ವಾತಂತ್ರ್ಯ ಚಳುವಳಿ

**ಡಾ.ಹಣಮಂತ ಬಿ. ಮೇಲಕೇರಿ**

ಆಧುನಿಕ ಕನ್ನಡ ಸಾಹಿತ್ಯದ ಸ್ವರೂಪವನ್ನು ರೂಪಿಸಿದ ಪ್ರಭಾವಗಳಲ್ಲಿ ಎರಡು ಪ್ರಮುಖ ಅಂಶಗಳು ಇಂಗ್ಲಿಷ ವಿದ್ಯಾಭ್ಯಾಸದ ಮೂಲಕ ಉಂಟಾದ ಪರಕೀಯರ ಅಂದರೆ, ಪಾಶ್ಚಿಮಾತ್ಯದ ಪ್ರಭಾವ ಮತ್ತು ರಾಜಕೀಯ ಹೋರಾಟದ ಮೂಲಕ ಉಂಟಾದ ರಾಷ್ಟ್ರೀಯತೆಯ ಪ್ರಜ್ಞೆ ಒಂದು ಕಡೆ ಜಗತ್ತಿನ ಅದು ಹೊರ ಜಗತ್ತಿನ ವಿಜ್ಞಾನ–ತಂತ್ರಜ್ಞಾನ ಪ್ರಗತಿಯಿಂದ ಉಂಟಾದ ನಾಗರಿಕತೆಯ ಆಕರ್ಷಣೆ ಜನರ ಜೀವನದ ದಿಕ್ಕು–ದೆಸೆಯನ್ನೇ ಬದಲಾಯಿಸಿತು. ಕಳೆದುಹೋದದ್ದನ್ನು ಪಡೆಯುವ ಬಯಕೆ ಒಂದೆಡೆ ಉಂಟಾದರೆ, ಸ್ವಾತಂತ್ರ್ಯದ ಸಂದರ್ಭದ ಬ್ರಿಟಿಷರ ಆಳ್ವಿಕೆಯಿಂದ ಮುಕ್ತಿ ಸಾಧಿಸುವುದು ಇನ್ನೊಂದೆಡೆಗಿನ ಒತ್ತಡ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಜನ್ಮತಾಳಿದ್ದು ಆಧುನಿಕ ಕನ್ನಡ ಕಾವ್ಯ ಅದು ಕನ್ನಡ ಕಾವ್ಯವಾಗಿದೆ.

ಆಧುನಿಕ ಕನ್ನಡ ಸಾಹಿತ್ಯವನ್ನು ನಾವು ೧೯ನೆಯ ಶತಮಾನದ ಕಾಲವೆಂದು ಗುರುತಿಸುತ್ತೇವೆ. ಈ ಶತಮಾನದ ಆದಿಭಾಗ ಅಂದರೆ ೧೮೫೦ ರಿಂದ ಸುಮಾರು ಒಂದು ಶತಮಾನ ಕಾಲಘಟ್ಟ ೧೯೫೦ ರವರೆಗೆ ಹೊಸ ರಾಷ್ಟ್ರೀಯ ಪ್ರಜ್ಞೆಯೊಂದು ದಟ್ಟವಾಗಿ ಆವರಿಸಿದ ಕಾಲವಾಗಿದೆ. ಇಂತಹ ಸಂದರ್ಭದಲ್ಲಿ ಸ್ವಾತಂತ್ರ್ಯದ ಹಂಬಲಕ್ಕಾಗಿ ದೇಶವೊಂದು ರಾಜಕೀಯ ಸಮರದಲ್ಲಿ ನಿರತವಾಗಿದ್ದ ಕಾಲವಾಗಿತ್ತು. ಹಾಗಾಗಿ ದೇಶದೆಲ್ಲೆಡೆ ಸ್ವಾತಂತ್ರ್ಯ ಚಳುವಳಿಯ ಹುರುಪು, ಹುಮ್ಮಸ್ಸು, ಅಪರಿಮಿತ ಉತ್ಸಾಹ, ಚಳುವಳಿ ಪ್ರತಿಭಟನೆಗಳು ನಡೆಯುತ್ತಲೇ ಬ್ರಿಟಿಷರನ್ನು ದೇಶದಿಂದ ಹೊರದೋಡಿಸಿ ಸ್ವಾತಂತ್ರ್ಯ ಪಡೆಯುವ ಹಂಬಲ ಎಲ್ಲರದಾಗಿತ್ತು. ಇಂತಹ ಸಂದರ್ಭದಲ್ಲಿ ಬಿ.ಎಂ.ಶ್ರೀ. ಅವರ ಇಂಗ್ಲೀಷ ಗೀತೆಗಳ ರಚನೆಯ ಮೂಲಕ ಆಧುನಿಕ ಕನ್ನಡ ಕಾವ್ಯಕ್ಕೆ ನಾಂದಿ ಹಾಡಿದರು ಗೋವಿಂದ ಪೈ. ಅವರು 'ಗೋಲ್ಗೊಥಾ' ಮತ್ತು ವೈಶಾಖ ನೀಳ್ಗವನಗಳು, ಗಿಳಿವಿಂಡು, ನಂದಾದೀಪ ಇತ್ಯಾದಿ ಬಿಡಿಕವನಗಳು ಪ್ರಕಟಗೊಂಡಿವೆ. ಆಗಿನ ಸಂದರ್ಭದಲ್ಲಿ ಈ ಇಬ್ಬರು ಮಹನೀಯರು ಉಂಟುಮಾಡಿದ ಕ್ರಾಂತಿಯ ಫಲವಾಗಿ ಹೊಸಕಾವ್ಯ ಹಾಗೂ ಹೊಸ ರೀತಿಯ ಕಾವ್ಯ ಭಾಷೆ ಹುಟ್ಟಿಕೊಂಡವು. ಇಂಗ್ಲೀಷ ಕವಿತೆಗಳನ್ನು ಕನ್ನಡಕ್ಕೆ ಭಾಷಾಂತರಿಸುವ ಮೂಲಕ ಕನ್ನಡಕ್ಕೆ ಹೊಸ ಆಯಾಮವನ್ನು ನೀಡಲಾಯಿತು ಮತ್ತು ಇಂಗ್ಲೀಷ ವಿದ್ಯಾಭ್ಯಾಸದ ಮೂಲಕವಾಗಿ ಹೊಸ ವಿಚಾರಗಳನ್ನು ಕನ್ನಡದಲ್ಲಿ ಅಭಿವ್ಯಕ್ತಗೊಳಿಸಲು, ರಾಷ್ಟ್ರೀಯ ಪ್ರಜ್ಞೆ ಜಾಗೃತಗೊಳಿಸಲು ಕೃತಿಗಳನ್ನು ರಚಿಸಲು ಸ್ವತಂತ್ರ ಅಭಿವ್ಯಕ್ತಿಯನ್ನು ವ್ಯಕ್ತಪಡಿಸಲು ಸಾಧ್ಯವಾಯಿತು. ಬಿ.ಎಂ.ಶ್ರೀ. ಅವರ ಇಂಗ್ಲೀಷ ಗೀತೆಗಳು ಸ್ವಾತಂತ್ರ್ಯ ಚಳುವಳಿಗೆ ಬಹು ಮುಖ್ಯ ಪ್ರೇರಣೆಯಾಯಿತು ಎಂದರೆ ತಪ್ಪಾಗಲಿಕ್ಕಿಲ್ಲ. ಏಕೆಂದರೆ ೧೯೨೧ ರಲ್ಲಿ ಪ್ರಕಟವಾದ ಸಂಗ್ರಹದಲ್ಲಿ ೬೩ ಕವನಗಳನ್ನು ಒಳಗೊಂಡಿದ್ದವು. ಶೆಲ್ಲಿ, ಕಿಟ್ಸ್, ವರ್ಡ್ಸವರ್ತ್, ಕೋಲರಿಚ್, ಷೇಕ್ಸಪಿಯರ್ ಇತ್ಯಾದಿ ಕವಿಗಳ ಕವನಗಳ ಅನುವಾದವನ್ನು ಕಾಣಬಹುದು.

ರಮ್ಯಕಾವ್ಯ ಸಂಪ್ರದಾಯದ ವಸ್ತು–ವೈವಿಧ್ಯ ಈ ಸಂಗ್ರಹದ ಮೂಲಕ ಕನ್ನಡಕ್ಕೆ ಬಂತು. ಅಷ್ಟೇ ಅಲ್ಲ, ಅಲ್ಲಿ ಪ್ರಕೃತಿವರ್ಣನೆ, ಪ್ರೇಮ, ದೇಶಪ್ರೇಮ, ಯುದ್ಧ, ಧೀರೋದಾತ್ತತೆ, ಧೈರ್ಯ, ನಂಬಿಕೆ, ಆತ್ಮಸ್ಥೈರ್ಯ ಮತ್ತು ಸ್ವಾತಂತ್ರ್ಯ ಇತ್ಯಾದಿ ಸಾರ್ವಕಾಲಿಕವೂ ಸರ್ವಸಮ್ಮತವೂ ಆದಂತಹ ವಿಶ್ವಾತ್ಮಕ ಮೌಲ್ಯಗಳನ್ನು ಎತ್ತಿಹಿಡಿಯುವ ಕವನಗಳನ್ನು ಬಿ.ಎಂ.ಶ್ರಿ ಆಯ್ದುಕೊಂಡರು.

ಕನ್ನಡದ ನವೋದಯದ ಸಂದರ್ಭದಲ್ಲಿ ಅತ್ಯಂತ ಸತ್ವಶಾಲಿ ಕಾವ್ಯ ಕುವೆಂಪು ಮತ್ತು ದ.ರಾ. ಬೇಂದ್ರೆ ಅವರ ಕಾವ್ಯ ಕಸುವಿನಲ್ಲಿ ಕಾಣಬಹುದು. ಇಲ್ಲಿ ಸತ್ವ–ತತ್ವ ಎರಡನ್ನು ಒಳಗೊಂಡಿತ್ತು. ಭಾವಗೀತೆಯನ್ನು ಸಮೃದ್ಧಗೊಳಿಸಿದ ಕುವೆಂಪು ಅವರು ತಮ್ಮ ಭಾವಗೀತೆಗಳನ್ನು ಪ್ರಕೃತಿ ವರ್ಣನೆ, ಸ್ನೇಹ, ಅಧ್ಯಾತ್ಮ ಚಿಂತನೆ, ಹಾಗೆಯೇ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕೇಡುಗಳ ಬಗ್ಗೆ ಅಸಹನೆ ಸಿಟ್ಟು, ರಾಷ್ಟ್ರೀಯ ಜಾಗೃತಿ ಮುಂತಾದ ಹತ್ತು ಹಲವು ವಿಷಯಗಳನ್ನು ಕಾವ್ಯವಾಗಿ ರಚಿಸಿದರು. ಅವರ 'ಪಕ್ಷಿಕಾಶಿ',

'ಅಗ್ನಿಹಂಸ', 'ಪ್ರೇಮಕಾಶ್ಮೀರ', 'ಇಕ್ಷುಗಂಗೋತ್ರಿ', 'ಕೋಗಿಲೆ' ಮತ್ತು 'ಸೋವಿಯತ್ ರಷ್ಯ' ಮುಂತಾದ ಕವನಸಂಕಲನಗಳನ್ನು ರಚಿಸಿದರು.

ಜನಪದರ ನುಡಿಗಟ್ಟುಗಳನ್ನು ಮತ್ತು ಸತ್ವ, ಲಯ, ಛಂದಸ್ಸುಗಳನ್ನು ಕಾವ್ಯದಲ್ಲಿ ಬಳಸಿಕೊಂಡು ಉತ್ತರ ಕರ್ನಾಟಕದ ಆಡುಭಾಷೆಯಲ್ಲಿ ಭಾವಗೀತೆಗಳನ್ನು ರಚಿಸಿದವರು ದ.ರಾ.ಬೇಂದ್ರೆ ಅವರು. ಅವರ ಕಾವ್ಯ ಅತ್ಯಂತ ಉನ್ನತ ಬೌದಿಕ ಚಟುವಟಿಕೆಯಾಗಿದೆ. ದಟ್ಟವಾದ ಅವರ ಅನುಭವ ಮತ್ತು ಬೌದ್ಧಿಕ ಶ್ರೇಷ್ಠತೆ ಇಡೀ ಕನ್ನಡದ ಸ್ವಾತಂತ್ರ್ಯ ಚಳುವಳಿಗೆ ಬಹುಮುಖ್ಯವಾದ ನೆಲೆ ಅವರ ಕಾವ್ಯಗಳಾಗಿವೆ.

ಅವರ ಕವನ ಸಂಕಲನಗಳೆಂದರೆ, ಗರಿ, ನಾದಲೀಲೆ, ಸಖೀಗೀತ, ಗಂಗಾವತರಣ, ನಾಕುತಂತಿ, ಕುರುಡು ಕಾಂಚಾಣ ಮತ್ತು ಪುಟ್ಟವಿಧವೆ ಮುಂತಾದವು. ಅವರು ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಬ್ರಿಟೀಷರ ವಿರುದ್ಧ ಅವರು ಆಡಳಿತ ವಿರೋಧಿಸುವ ಕವಿತೆ ಬರೆದು ಜೈಲುವಾಸ ಅನುಭವಿಸಿ ಬಂದ ಕೆಚ್ಚೆದೆಯ ಕವಿ ಬೇಂದ್ರೆಯವರು. ಅಷ್ಟೊಂದು ರಾಷ್ಟ್ರಭಕ್ತಿಯು ಅವರಲ್ಲಿ ಜಾಗೃತಗೊಂಡಿರುವುದನ್ನು ಕಾಣುತ್ತೇವೆ.

ನವೋದಯದ ಕಾಲದಲ್ಲಿ ಭಾವಗೀತಕಾರರಾಗಿ ಜೀವನ ಹಾಗೂ ಕಾವ್ಯಜೀವನ ಆರಂಭಿಸಿದವರು ಗೋಪಾಲಕೃಷ್ಣ ಅಡಿಗರು. 'ಭಾವತರಂಗ', 'ಕಟ್ಟುವೆವು ನಾವು' ಕವನ ಸಂಕಲನಗಳು ರಾಷ್ಟ್ರೀಯತೆಯ ಸ್ವಾತಂತ್ರ್ಯ ಚಳುವಳಿಗೆ ದೇಶದ ಐಕ್ಯತೆ, ಭಾವೈಕ್ಯತೆಗೆ ಇಂಬು ನೀಡುವ ಕಾವ್ಯ ಸಂಕಲನಗಳಾಗಿವೆ.

ಗೋಕಾಕರು ಭಾಷೆ ಮತ್ತು ಛಂದೋರೂಪಗಳ ಪ್ರವೇಶದಲ್ಲಿ ತೊಡಗಿ ಕಾವ್ಯ ರಚಿಸಿದರು. ಇವರ ಕಾವ್ಯದಲ್ಲಿ ಮಾನವ ಜನಾಂಗ ಕಂಗೆಟ್ಟ ಸ್ಥಿತಿ ನಿರರ್ಥಕತೆ, ಹತಾಶೆ, ನೋವುಗಳನ್ನು ಸ್ವಾತಂತ್ರ್ಯ ಚಿತ್ರಣ ಒಳಗೊಂಡ ಕಾವ್ಯ ರಚಿಸಿದರು. ಹೀಗೆ ಆಧುನಿಕ ಕಾವ್ಯ ನವ್ಯ, ನವೋದಯ, ಬಂಡಾಯ–ದಲಿತ, ಪ್ರಗತಿಶೀಲ ಕಾಲಘಟ್ಟಗಳಲ್ಲಿ ರಚನೆಗೊಂಡಿದೆ.

ಒಟ್ಟಾರೆಯಾಗಿ ಕನ್ನಡಕಾವ್ಯ ಕನ್ನಡದ ಅನೇಕ ಕವಿಗಳ, ಸಾಹಿತಿಗಳ, ವಿದ್ವಾಂಸರು ಬರಹಗಾರರಿಂದ ರೂಪಿತಗೊಂಡಿದೆ ಎಂದೇ ಹೇಳಬಹುದು. ಅದು ಬಿ.ಎಂ.ಶ್ರೀ. ಅವರಿಂದ ಹಿಡಿದು ಇಂದಿನ ಎಚ್.ಎಸ್. ವೆಂಕಟೇಶಮೂರ್ತಿ, ದೊಡ್ಡರಂಗೇಗೌಡರವರೆಗೆ ಸಾಗಿ ಬಂದ ಕಾವ್ಯವಾಗಿ ಇನ್ನೂ ಮುಂದುವರೆಯುತ್ತಲೇ ಇದೆ. ಕನ್ನಡ ಕಾವ್ಯ ಸ್ವಾತಂತ್ರ್ಯ ಚಳುವಳಿಗೆ ಅಮೂಲ್ಯವಾದುದ್ದನ್ನು ಕಾಣಬಹುದಾಗಿದೆ. ಐತಿಹಾಸಿಕ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ತುಡಿತ–ಮಿಡಿತಗಳನ್ನು ಹಲವಾರು ಕವಿಗಳ ಕಾವ್ಯದಲ್ಲಿ ವ್ಯಕ್ತಗೊಂಡಿರುವುದನ್ನು ಕಾಣುತ್ತೇವೆ. ಡಿ.ಎಸ್. ಕರ್ಕಿಯವರು 'ಸದಾ ಉರಿಯುತ್ತಿರುವ ಹಾಗೆ ಸ್ವಾತಂತ್ರ್ಯದ ಹಣತೆ' ಎಂದರೆ ಅಡಿಗರು ಕಟ್ಟುವೆವು ನಾವು ಹೊಸ ನಾಡೊಂದನ್ನ, ರಸದ ಬೀಡೊಂದನ್ನ ಎಂದಿದ್ದಾರೆ. ಇನ್ನೊಂದೆಡೆ ಕವಿ 'ಕಟ್ಟುತ್ತೇವೆ ನಾವು ಕಟ್ಟುತ್ತೇವ ನಾವು ಕಟ್ಟೆ ಕಟ್ಟುತ್ತೇವೆ'. ಒಡೆದ ಮನಸ್ಸುಗಳ ಕಂಡ ಕನಸುಗಳ ಕಟ್ಟೆ ಕಟ್ಟುತ್ತೇವೆ ಎನ್ನುತ್ತಾರೆ. ಕೆ.ಎಸ್. ನಿಸಾರ ಅಹಮ್ಮದರು ನಿತ್ಯೋತ್ಸವ ಲಾಮೆ ನಿತ್ಯೋತ್ಸವ ಎನ್ನುತ್ತಾರೆ. ಹಾಗಾಗಿ ಸ್ವಾತಂತ್ರ್ಯ ಚಳುವಳಿಗೆ ಕನ್ನಡ ಕಾವ್ಯವು ಎಚ್ಚರಿಕೆಯ ಘಂಟೆಯಾಗಿ, ಸದ್ದು ಮಾಡದೆ, ಜನಮಾನಸವನ್ನು ಸ್ವಾತಂತ್ರ್ಯದೆಡೆಗೆ ಕೊಂಡೊಯ್ಯುವ ಮಾರ್ಗವಾಗಿ ಕಾರ್ಯ ಸಾಧನೆಗೈದಿದೆ. ಹಾಗಾಗಿ ಸಮಕಾಲೀನ ಸಂದರ್ಭದಲ್ಲಿ ಕನ್ನಡ ಕಾವ್ಯ ಸ್ವಾತಂತ್ರ್ಯದ ಚಳುವಳಿಯ ಜೊತೆ–ಜೊತೆಗೆ ಸಾಗಿ ಜನಮಾನಸವನ್ನು ಎಚ್ಚರಿಸುವ ಸ್ವಾತಂತ್ರ್ಯ ಚಳುವಳಿಗೆ ಧುಮುಕುವ ದೇಶಾಭಿಮಾನ, ಭಾಷಾಭಿಮಾನ ಬಡಿದೆಬ್ಬಿಸುವ ಸ್ವಚ್ಛ ಸಮಾಜ, ಸಮೃದ್ಧ ರಾಷ್ಟ್ರ ನಿರ್ಮಾಣದ ಪ್ರಗತಿಯ ಹೊಂಗಿರಣವಾಗಿ ರೂಪಗೊಂಡಿದೆ. ಹಾಗಾಗಿ ಸ್ವಾತಂತ್ರ್ಯ ಚಳುವಳಿಗೆ ಆಧುನಿಕ ಕಾವ್ಯದ ಕೊಡುಗೆ ತುಂಬ ಅಪಾರವಾದದ್ದು.